# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೆಚ್.ಎ.ಎಲ್ ಏರ್‌ಪೋರ್ಟ್ ಉಪವಿಭಾಗ ಮಹದೇವಪುರ ವಲಯ, ಬೆಂಗಳೂರು

ಸಂಖ್ಯೆ.ಬಿಬಿಎಂಪಿ/ಸ.ಕಾ.ಅ/ಹೆಚ್.ಎ.ಎಲ್/ಪಿಆರ್/ 10/2022-23 ದಿನಾಂಕ: 07-02-2023

### 10 ನೇ ವಾರ್ಡ್ ಸಮಿತಿ ಸಭೆಯ ನಡಾವಳಿಗಳು.

ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಾನ್ಯ ಆಯುಕ್ತರು ಕಛೇರಿ ಆದೇಶ ಸಂ: ಬಿ12(5)/ಪಿಆರ್/35/2020-21 ದಿನಾಂಕ:04/04/2022, ಆದೇಶದಂತೆ ಜಂಟಿ ಆಯುಕ್ತರು ಮಹದೇವಪುರ ವಲಯ ರವರ ಕಛೇರಿ ಆದೇಶ ಸಂ:ಜಂಆ/ಮವ/ಪಿ.ಎಸ್/1651/2022-23 ದಿನಾಂಕ: 18-07-2022 ರಂತೆ ಶ್ರೀ.ಸೋಮಯ್ಯ.ಜಿ.ಡಿ, ಸಹಾಯಕ ಅಭಿಯಂತರು (ವಾರ್ಡ್ ನಂ-91 .ಎ.ನಾರಾಯಣಪುರ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರನ್ನು ವಾರ್ಡ್ ನಂ-91 .ಎ.ನಾರಾಯಣಪುರದ ವಾರ್ಡ್ ಸಮಿತಿ ಸಭೆಯ ನೋಡಲ್ ಅಧಿಕಾರಿಯನ್ನಾಗಿ ನೇಮಿಸಿರುತ್ತಾರೆ. ಅದರಂತೆ ದಿನಾಂಕ:23-09-2022ರಂದು ನೋಡಲ್ ಅಧಿಕಾರಿಯಾದ ಶ್ರೀ.ಸೋಮಯ್ಯ.ಜಿ.ಡಿ, ಸಹಾಯಕ ಅಭಿಯಂತರು (ವಾರ್ಡ್ ನಂ-91 ಎ.ನಾರಾಯಣಪುರ) ರವರ ಅದ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು ಈ ಕೆಳಕಂಡಂತೆ ಇರುತ್ತದೆ.

**ಉಪಸ್ಥಿತರು:**

| ಕ್ರ.ಸಂ | ಹೆಸರು | ಹುದ್ದೆ |
|---|---|---|
| | ಅಧಿಕಾರಿಗಳು | |
| 1 | ಶ್ರೀ.ಜಿ.ಡಿ.ಸೋಮಯ್ಯ | ವಾರ್ಡ್ ಸಮಿತಿಯ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ನಂ.56 ಎ.ನಾರಾಯಣಪುರ |
| 2 | ಶ್ರೀ.ವಿಜಯ ಕುಮಾರ್ ಎಂ.ಕೆ | |
| 3 | ಶ್ರೀ. ಪ್ರಭಾಕರನ್ | ಕಂದಾಯ ಪರಿವೀಕ್ಷಕರು |
| 4 | ಶ್ರೀ. ಡಾ.ಮುರುಗನ್ | |
| 5 | ಶ್ರೀ.ಮೊಹಮ್ಮದ್ ಮುದಾಸೀರ್ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) |
| 6 | ಶ್ರೀ.ರಾಜನ್ ಹೆಚ್.ಎಸ್ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 7 | ಶ್ರೀ.ಡಾ.ಮೋಹಿನ್ | ಆರೋಗ್ಯಾಧಿಕಾರಿ |
| 8 | ಶ್ರೀಮತಿ.ಮಂಜುಳ | ಹಿರಿಯ ಆರೋಗ್ಯ ನಿರೀಕ್ಷಕರು |
| 9 | ಶ್ರೀಮತಿ.ಸುವರ್ಣ ಹೆಚ್.ಸಿ | ಕಿರಿಯ ಆರೋಗ್ಯ ನಿರೀಕ್ಷಕರು |
| 10 | ಶ್ರೀ.ಮೋಹನ್ | ಪಶು ವೈದ್ಯರು |
| | ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು | |
| 11 | ಶ್ರೀ.ಸುರೇಶ್.ವಿ | ಎ-ನಾರಾಯಣಪುರ |
| 12 | ಶ್ರೀಮತಿ.ಸುಲೇಖಾ | ಎ-ನಾರಾಯಣಪುರ |
| 13 | ಶ್ರೀ.ಸುನಿಲ್ | ಎ-ನಾರಾಯಣಪುರ |
| 14 | ಶ್ರೀಮತಿ.ನಾಗಮ್ಮ | ಎ-ನಾರಾಯಣಪುರ |
| 15 | ಶ್ರೀಮತಿ.ವಸಂತ | ಎ-ನಾರಾಯಣಪುರ |
| 16 | ಶ್ರೀ. ಬಿ. ಪೂವಯ್ಯ | ಎ-ನಾರಾಯಣಪುರ |
| 17 | ಶ್ರೀ. ಪಿ.ಶ್ರೀರಾಮುಲು | ಎ-ನಾರಾಯಣಪುರ |

**ನಡಾವಳಿ 1.** ಕೋವಿಡ್‌–19ರ ಸಾಂಕ್ರಮಿಕ ರೋಗಕ್ಕೆ ಸಂಬಂಧಿಸಿದಂತೆ, ಸೋಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗೃತ ಕ್ರಮಗಳ ಬಗ್ಗೆ.

ಎ.ನಾರಾಯಣಪುರ ವಾರ್ಡ್ ವ್ಯಾಪ್ತಿಯಲ್ಲಿ "ಜನ ಔಷದಿ" ಕೇಂದ್ರವನ್ನು ಸ್ಥಾಪಿಸಬೇಕೆಂದು ಸಾರ್ವಜನಿಕರು ಕೋರಿರುತ್ತಾರೆ.

ಕ್ರಮ: ವಲಯ ಆರೋಗ್ಯಾಧಿಕಾರಿಗಳು ಮಹದೇವಪುರ ವಲಯ

**ನಡಾವಳಿ 2.** ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಹಾಗೂ ಒಳಚರಂಡಿಗಳ ಸಂಬಂಧಿಸಿದ ವಿಷಯಗಳ ಬಗ್ಗೆ.

ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರು ಮಾತಾನಾಡಿ ಪ್ರಸ್ತುತ ಕುಡಿಯುವ ನೀರನ್ನು ಶುಕ್ರವಾರ ಮತ್ತು ಭಾನುವಾರದಂದು ಬಿಡುತ್ತಿದ್ದು ಇದರಿಂದ ಉಳಿದ ದಿನಗಳಲ್ಲಿ ನೀರಿನ ಸಮಸ್ಯೆ ಹೆಚ್ಚಾಗುತ್ತಿರುವ ಕಾರಣ 2 ದಿನಕ್ಕೆ ಒಮ್ಮೆ ನೀರಿನ ಬಿಡಬೇಕೆಂದು ಮತ್ತು ಆರ್.ಆರ್.ಬೇಕರಿ ಮತ್ತು ಆಂದ್ರಕಾಲೋನಿಯಲ್ಲಿ ವಾಲ್ ಹಾಕಿಕೊಡಬೇಕೆಂದು, ಕಾವೇರಿ ರಸ್ತೆ 5ನೇ ಅಡ್ಡರಸ್ತೆ ನೀರಿನ ಕೊರತೆ ಇದ್ದು ಸರಿಪಡಿಸಬೇಕೆಂದು ಸಾರ್ವಜನಿಕರು ಮನವಿ ಮಾಡಿಕೊಂಡಿರುತ್ತಾರೆ.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು,
ಬಿ.ಡಬ್ಲ್ಯೂ.ಎಸ್.ಎಸ್.ಬಿ

**ನಡಾವಳಿ 3.** ವಾರ್ಡ್‌ನಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ.

ವಾರ್ಡ್ ವ್ಯಾಪ್ತಿಯಲ್ಲಿ ಬ್ಲಾಕ್ ಸ್ಪಾಟ್‌ಗಳು ಹೆಚ್ಚಾಗುತ್ತಿದ್ದು, ವಿವೇಕಾನಂದ 4ನೇ ಅಡ್ಡರಸ್ತೆಯಲ್ಲಿ ತುಂಬ ಕಸ ಇದೆ ಮತ್ತು ಪೌರಕಾರ್ಮಿಕರು ಪ್ರತಿ ದಿನ ಯಾವ ಕಡೆ ಹೋಗುತ್ತಿರುವುದಾಗಿ ಪಟ್ಟಿ ತಯಾರಿಸಿಕೊಂಡು ಮುಂದಿನ ಸಭೆಗೆ ಹಾಜರಾಗಲು ಸಾರ್ವಜನಿಕರು ತಿಳಿಸಿದರು.

ಕ್ರಮ: ಹಿರಿಯ ಆರೋಗ್ಯ ನಿರೀಕ್ಷಕರು ಮತ್ತು ಕಿರಿಯ ಆರೋಗ್ಯ ನಿರೀಕ್ಷಕರು

**ನಡಾವಳಿ 4.** ವಾರ್ಡ್‌ನ ವಿವಿಧ ಕಾಮಗಾರಿಗಳ ಅಭಿವೃದ್ದಿ ಕಾರ್ಯಗಳ ಬಗ್ಗೆ.

ವಾರ್ಡ್‌ನ ಅಭಿವೃದ್ದಿ ಕಾಮಗಾರಿಗಳ ಬಗ್ಗೆ ಚರ್ಚಿಸಲಾಗಿದ್ದು.ವಾರ್ಡ್ ವ್ಯಾಪ್ತಿಯ ಶಕ್ತಿನಗರ ರಸ್ತೆ, ಮಡೋನಾ ಸ್ಕೂಲ್ ರಸ್ತೆ ಮತ್ತು ವಿವೇಕಾನಂದ ರಸ್ತೆಗಳಲ್ಲಿ ರಸ್ತೆ ಕಾಮಗಾರಿಯನ್ನು ಬೇಗ ಪೂರ್ಣಗೊಳಿಸಬೇಕೆಂದು ಸಾರ್ವಜನಿಕರು ಒತ್ತಯಿಸಿದರು, ಅದರಂತೆ ಸಾರ್ವಜನಿಕರ ಸಮಸ್ಯೆಗಳನ್ನು ಬಗೆಹರಿಸುವಂತೆ ಸಂಬಂಧಪಟ್ಟ ಅಭಿಯಂತರರಿಗೆ ಸೂಚಿಸಲಾಯಿತು.

ಕ್ರಮ: ಸಹಾಯಕ ಅಭಿಯಂತರರು ವಾರ್ಡ್ 91

ನೋಡಲ್ ಅಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿ
ಸಹಾಯಕ ಅಭಿಯಂತರರು ವಾರ್ಡ್ ನಂ.91
ಎ.ನಾರಾಯಣಪುರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:-

1. ಮಾನ್ಯ ಜಂಟಿ ಆಯುಕ್ತರು, ಮಹದೇವಪುರ ವಲಯ ರವರ ಮಾಹಿತಿಗಾಗಿ ರವಾನಿಸಿದೆ.
2. ಮುಖ್ಯ ಅಭಿಯಂತರರು, ಮಹದೇವಪುರ ವಲಯ ರವರ ಮಾಹಿತಿಗಾಗಿ ರವಾನಿಸಿದೆ.
3. ಕಛೇರಿ ಪ್ರತಿ.